# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 8/2025

ಡಬ್ಲ್ಯೂ.ಡಬ್ಲ್ಯೂ- 1

**<u>ದಿನಾಂಕ 29.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಸಂಖ್ಯೆ-2 ರವರ ಪರ ಶ್ರೀಮತಿ.ಎಲ್.ಎನ್.ಆರ್. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ದಿನಾಂಕಃ15.11.2023 ರಂದು ಸೇರಿಕೊಂಡಿರುತ್ತೇನೆ. 2 ನೇ ಪಕ್ಷಗಾರರ ಸಂಖ್ಯೆ-2 ರವರು ನನಗೆ ನೇಮಕಾತಿ ಪತ್ರವನ್ನು ಕೊಟ್ಟಿಲ್ಲ, ಐ.ಡಿ. ದಾಖಲೆಯನ್ನು ಕೊಟ್ಟಿರುತ್ತಾರೆ. ಐ.ಡಿ. ಕಾರ್ಡ್ ನಲ್ಲಿ ನನ್ನನ್ನು ಭದ್ರತಾ ಸಿಬ್ಬಂದಿ ಎಂದು ನೇಮಕಾ ಮಾಡಿಕೊಂಡಿರುವ ಬಗ್ಗೆ ನಮೂದು ಇರುತ್ತದೆ. 2 ನೇ ಪಕ್ಷಗಾರರ ಸಂಖ್ಯೆ-2 ರವರು ಕಾರ್ಮಿಕರನ್ನು ಯಾವಾಗ ನವೀಕರಣ ಮಾಡುತ್ತಾರೆ ಎನ್ನುವುದನ್ನು ನನಗೆ ತಿಳಿಸಿಲ್ಲ. ಗುತ್ತಿಗೆದಾರರ ಗುತ್ತಿಗೆ ಅವಧಿಯು ನವೆಂಬರ್ 2023 ರಿಂದ ಮಾರ್ಚ್ 2024 ರವರೆಗೆ ಒಂದು ಕರಾರು ಇದ್ದು ನಂತರ ಹೊಸ ಕರಾರು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ದಿನಾಂಕಃ18.04.2024 ರಂದು ನಾನು ರಾತ್ರಿ ಪಾಳೆಯಲ್ಲಿ ಕೆಲಸ ಮಾಡಿದ್ದು, ಆ ದಿವಸ ನಾನು ಕೆಲಸದಿಂದ 15 ನಿಮಿಷ ಬೇಗ ಹೋರಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನದಂದು ಯಾರಿಗೂ ತಿಳಿಸದೆ 15 ನಿಮಿಷ ಮುಂಚೆ ಕೆಲಸವನ್ನು ಬಿಟ್ಟು ಹೋರಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಅನಂತರಾಜು ರವರು ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಅದಕ್ಕೆ ನಾನು ನನ್ನ ಸಮಯಕ್ಕೆ ನಾನು ಹೋಗುತ್ತಿದ್ದೇನೆ ಎಂದು ಉತ್ತರ ಕೊಟ್ಟಿದ್ದೆ.

ನಾನು ½ ಗಂಟೆ ಮುಂಚೆ ನನ್ನ ಕೆಲಸವನ್ನು ಬಿಟ್ಟು ಹೋಗಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ನಿಗಧಿತ ಸಮಯದಲ್ಲೇ ಕೆಲಸ ಬಿಟ್ಟು ಹೋಗಿರುತ್ತೇನೆ ಎನ್ನುತ್ತಾರೆ. ನಾನು ಆ ರೀತಿಯಾಗಿ ಕೆಲಸವನ್ನು ಬಿಟ್ಟು ಹೋದ ಮೇಲೆ 2 ನೇ ಪಕ್ಷಗಾರರ ಸಂಖ್ಯೆ-2 ರವರು ಮೇಲ್ ಅಧಿಕಾರಿಗಳಿಗೆ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಯಾರಿಗೂ ತಿಳಿಸಿಲ್ಲ ಎನ್ನುತ್ತಾರೆ. ನಾನು

ಕೆಲಸದಿಂದ ಮುಂಚೆ ಹೋಗಿದ ಬಗ್ಗೆ ಕಾರಣವನ್ನು 7 ದಿನಗಳ ಒಳಗೆ ನನ್ನ ಮೇಲ್ ಅಧಿಕಾರಿಗಳಿಗೆ ತಿಳಿಸಬೇಕಾಗಿತ್ತು ಆ ರೀತಿ ಮಾಡಿರುತ್ತೀರ ಎಂದರೆ ಸಾಕ್ಷಿ ನಾನು ದೂರವಾಣಿ ಮೂಲಕ ನಮ್ಮ field officer ಗೆ ತಿಳಿಸಿದ್ದೆ ಎನ್ನುತ್ತಾರೆ. ಅದಾದ ನಂತರ ನಾನು ಕೆಲಸಕ್ಕೆ ನಾನು ಹಾಜರಾಗಿಲ್ಲ ಎಂದರೆ ಸಾಕ್ಷಿ ಅವರು ಬರಬೇಡಿ ಎಂದು ಹೇಳಿದ್ದರು ಎನ್ನುತ್ತಾರೆ.

ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಕಚೇರಿಗೆ ಹೋಗಿ ಸದರಿ ವಿಚಾರವನ್ನು ತಿಳಿಸಿದ್ದೆ. 2 ನೇ ಪಕ್ಷಗಾರರ ಸಂಖ್ಯೆ-2 ರವರು ನನಗೆ ಒಂದು ಪತ್ರದ ಮೂಲಕ ನಾನು ಬಂದು ವಿವರಣೆ ಕೊಡಬೇಕು ಎಂದು ತಿಳಿಸಿದ್ದರು ಎಂದರೆ ನಾನು ಕಾರ್ಮಿಕ ಕಚೇರಿಯಲ್ಲಿ ಪ್ರಕರಣ ದಾಖಲಾದ ನಂತರ ಆ ರೀತಿ ತಿಳಿಸಿರುತ್ತಾರೆ ಎನ್ನುತ್ತಾರೆ. ಸದರಿ ಪತ್ರಕ್ಕೆ ನಾನು ಉತ್ತರ ಕೊಟ್ಟಿರುವುದಿಲ್ಲ. ಅದಾದ ನಂತರ 2 ನೇ ಪಕ್ಷಗಾರರ ಸಂಖ್ಯೆ-2 ರವರು ದಿನಾಂಕಃ 15.05.2024 ರಂದು ನನಗೆ ಇನ್ನೊಂದು ಪತ್ರವನ್ನು ಕಳುಹಿಸಿ ನನ್ನ ವಿವರ ಕೊಡುವಂತೆ ಕೋರಿದ್ದು ಎಂದರೆ ಸಾಕ್ಷಿ ನಾನು ಅದನ್ನು ತೆಗೆದುಕೊಂಡಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಾನು ಕಾರ್ಮಿಕ ಕಚೇರಿಯಲ್ಲಿ ಪ್ರಕರಣ ದಾಖಲೆ ಮಾಡುವ ಮುಂಚೆ ಅವರು ಯಾವುದೇ ವಿವರಣೆಯನ್ನು ನನ್ನಿಂದ ಕೇಳಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**